ಸುಲಭವಾದ ಮಾರ್ಗ ಎಂದೂ ಅರ್ಥ. ಒಂದು ಸುಳಾದಿ ಹಾಡುವುದು 100 ದೇವರನಾಮಗಳನ್ನು ಹಾಡುವುದಕ್ಕೆ ಸಮ ಎನ್ನುವುದು ಸಂಗೀತಜ್ಞರ ಅಭಿಮತ. ಸುಳಾದಿಯು ದೇವರಿಗೆ ಮಂತ್ರದಂತೆ ಸಾಮರಸ್ಯದಿಂದ ಬೆಸೆದುಕೊಂಡ ಸಂಗೀತ ಮತ್ತು ಕಾವ್ಯದ ಸಂಯೋಜನೆ ಎಂದರೂ ತಪ್ಪಿಲ್ಲ. ಗುರು ರಾಘವೇಂದ್ರ ಸ್ವಾಮಿ ಅವರು ಬರೆದದ್ದು ಒಂದೇ ಒಂದು ಸುಳಾದಿ. ಇದು ಬಹು ಜನಪ್ರಿಯ.

## ರಾಯರ ಮಹಿಮೆಯ ಬಣ್ಣಿಸಲಸದಳ

ರಾಘವೇಂದ್ರ ಸ್ವಾಮಿಯ ಮೇಲೆ ಲೆಕ್ಕವಿಲ್ಲದಷ್ಟು ದೇವರನಾಮ, ಕೃತಿ, ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು ರಚನೆಯಾಗಿವೆ. ಎಲ್ಲವೂ ರಾಯರ ಮಹಿಮೆಯನ್ನು ಇನ್ನಿಲ್ಲದಂತೆ ವರ್ಣಿಸಿವೆ. ಕೃತಿ ರಚನೆಕಾರರು ರಾಯರನ್ನು ಅಕ್ಷರಗಳ ಮೂಲಕ ಹಾಡಿಹೊಗಳಿದರೆ, ಗಾಯಕರು–ವಾದಕರು ರಾಯರನ್ನು ಸ್ವರಗಳ ಮೂಲಕ ಗುಣಗಾನ ಮಾಡಿರುವುದು ರಾಘವೇಂದ್ರ ಸ್ವಾಮಿಯ ಮಹಿಮೆಯೇ ಆಗಿದೆ. ರಾಯರ ಹಾಡುಗಳನ್ನು ಕೇಳಿದರೆ ರೋಮಾಂಚನವಾಗುತ್ತದೆ. ಮನಸ್ಸು ನಾದದಲೆಯಲ್ಲಿ ತೇಲುತ್ತದೆ. ಹೃದಯ ಕರಗುತ್ತದೆ, ಹಾಲಿನಲ್ಲಿ ಸಕ್ಕರೆ ಕರಗಿದಂತೆ. ಹೀಗಾಗಿ ಮಂತ್ರಾಲಯದ ಹಾಡುಗಳೆಂದರೆ ಅದು ಎಂದೆಂದಿಗೂ ಕೇಳುಗರಲ್ಲಿ ಚಿರಸ್ಥಾಯಿಯಾಗಿಯೇ ಉಳಿಯುತ್ತದೆ.

ರಾಯರ ಮೇಲಿರುವ ಒಂದೊಂದು ಹಾಡುಗಳೂ ಮೈಮರೆಯುವಂತಿವೆ. ಮನಕ್ಕೆ ಪುಳಕ ನೀಡುತ್ತವೆ. ವರನಟ ರಾಜಕುಮಾರ್ ಹಾಡಿರುವ

'ಹಾಲಲ್ಲಾದರು ಹಾಕು,
ನೀರಲ್ಲಾದರು ಹಾಕು'

ಹಾಡನ್ನೇ ಕೇಳಿ. ಎಷ್ಟು ಬಾರಿ ಕೇಳಿದರೂ ಮತ್ತೆ ಮತ್ತೆ ಕೇಳುವಂತಿದೆ ಈ ಹಾಡು. ಭಕ್ತಿಯ ಮಹಾಪೂರವೇ ಹರಿದುಬರುವಂತೆ ತನ್ಮಯರಾಗಿ ಅಣ್ಣಾವ್ರು ಹಾಡಿದ್ದು, ಎಲ್ಲರೂ ಮೆಲುಕು ಹಾಕುವಂತಿದೆ.

ರಾಜಕುಮಾರ್ ಹಾಡಿರುವ ಇನ್ನೊಂದು ಎವರ್‌ಗ್ರೀನ್ ಹಾಡು

'ವಾರ ಬಂತಮ್ಮ,
ಗುರುವಾರ ಬಂತಮ್ಮ
ರಾಯರ ನೆನೆಯಮ್ಮ,
ಗುರುರಾಯರ ನೆನೆಯಮ್ಮ...'

ಚಿ. ಉದಯಶಂಕರ್ ರಚಿಸಿದ್ದು, ಭಕ್ತಿರಸವನ್ನು ಸೂಸುವ ಈ ಗೀತೆ ಅತ್ಯಂತ ಜನಪ್ರಿಯತೆ ಗಳಿಸಿದೆ.

'ರಾಘವೇಂದ್ರಾ ದಯ ತೋರೋ', ಸುಗಮ ಸಂಗೀತದ ಹಿರಿಯ ಗಾಯಕಿ ಎಚ್.ಆರ್. ಲೀಲಾವತಿ ಅವರು ಹಾಡಿರುವ ಲಲತ್ ರಾಗದ ಈ ಸಂಯೋಜನೆ ಎಂದಿಗೂ ಸಂಗೀತಪ್ರಿಯರು ಇಷ್ಟಪಡುವಂಥದ್ದೇ ಆಗಿದೆ.

ಗಾಯಕ ವಿದ್ಯಾಭೂಷಣ, ಎಸ್. ಜಾನಕಿ ಹಾಗೂ ಎಸ್.ಪಿ. ಬಾಲಸುಬ್ರಹ್ಮಣ್ಯಂ ಹಾಡಿರುವ ಮಂತ್ರಾಲಯ ರಾಯರ ಮಹಿಮೆಯ ಎಲ್ಲ ಸಿನಿಮಾ ಗೀತೆಗಳು ಸೂಪರ್ ಹಿಟ್ ಆಗಿವೆ.



ಮೈಸೂರಿನ ಕಲಾವಿದರು ಬಿಡಿಸಿದ ರಾಘವೇಂದ್ರ ಸ್ವಾಮಿ ಅವರ ಬೃಹತ್ ರಂಗೋಲಿ.

ರಾಘವೇಂದ್ರ ರಾಯರ ಶಯನೋತ್ಸವ ಸೇವೆಯ ಸಮಯದಲ್ಲಿ ಹಾಡುವ ಇನ್ನೊಂದು ಜನಪ್ರಿಯ ಗೀತೆಯೆಂದರೆ

'ತೂಗಿರೆ ರಾಯರ,
ತೂಗಿರೆ ಗುರುಗಳ,
ತೂಗಿರೆ ಯತಿಕುಲ ತಿಲಕರ...'

ಈ ಹಾಡು ಸಾರ್ವಕಾಲಿಕವಾಗಿ ಎಲ್ಲರೂ ಹಾಡುವಂಥದ್ದು.

ಜನರಿಗೆ ಕಷ್ಟಗಳು ಬಂದಾಗ ಮೊದಲು ನೆನೆಯುವುದು ರಾಯರನ್ನೇ. ಹೀಗಾಗಿಯೇ,

'ಈ ಕಷ್ಟಗಳನು ದೂರ ಮಾಡು ರಾಘವೇಂದ್ರನೆ... ಈ ಪಾಡು ಬೇಡವೋ...'

ಎಂಬ ಸುಮಧುರ ಹಾಡು ರಚಿತವಾಗಿದೆ.

'ಬಾರೊ ಗುರು ರಾಘವೇಂದ್ರ... ಬಾರಯ್ಯ ಬಾ ಬಾ...' ಭಕ್ತಿಗೀತೆ ಕೇಳುಗರಿಗೆ ಎಂದಿಗೂ ಭಕ್ತಿರಸದ ಸಿಂಚನವನ್ನೇ ನೀಡುತ್ತದೆ.

ರಾಯರ ದಿನ ಯಾವುದೇ ಸಂಗೀತ ಕಛೇರಿ ನಡೆಯಲಿ, ಕಲಾವಿದರು

'ಪೂಜ್ಯಾಯ ರಾಘವೇಂದ್ರಾಯ,
ಸತ್ಯಧರ್ಮ ರತಾಯಚ,
ಭಜತಾಂ ಕಲ್ಪವೃಕ್ಷಾಯ,
ನಮತಾಂ ಕಾಮಧೇನವೇ...'

ಎಂಬ ಶ್ಲೋಕ ಆರಂಭಿಸದೇ ಗಾಯನ ಶುರುವಾಗುವುದೇ ಇಲ್ಲ. ಅಷ್ಟೊಂದು ಜನಪ್ರಿಯ ಈ ಶ್ಲೋಕ. ಅದೇ ರೀತಿ ರಾಯರ ಯಾವುದೇ ಮಠಕ್ಕೆ ಹೋಗಿರಲಿ ಈ ಶ್ಲೋಕದ ಸಾಲುಗಳು ರಾರಾಜಿಸುತ್ತಿರುತ್ತವೆ.

ಸಂಗೀತಕ್ಕೂ ರಾಯರಿಗೂ ಇಷ್ಟೊಂದು ಅವಿನಾಭಾವ ಸಂಬಂಧವಿರಲು ಪ್ರಮುಖ ಕಾರಣ ರಾಘವೇಂದ್ರ ಸ್ವಾಮಿಗಳ ಮನೆತನವೇ ಸಂಗೀತದ್ದಾಗಿರುವುದು. ಇತಿಹಾಸವನ್ನು ತೆಗೆದು ನೋಡಿದರೆ ಗುರು ರಾಘವೇಂದ್ರ ಸ್ವಾಮಿಗಳ ಪೂರ್ವಾಶ್ರಮದ ಹೆಸರು ವೆಂಕಟನಾಥ. (ಇವರನ್ನು ವೆಂಕಣ್ಣ ಭಟ್ಟ, ವೆಂಕಟಾಚಾರ್ಯ ಎಂದೂ ಕರೆಯುವುದಿದೆ) ಇವರ ತಂದೆ ತಿಮ್ಮಣ್ಣ ಭಟ್ಟರು. ತಾಯಿ ಗೋಪಿಕಾಂಬೆ. ತಿಮ್ಮಣ್ಣ ಭಟ್ಟರ ತಾತನವರು ಕೃಷ್ಣ ಭಟ್ಟರು. ಇವರು ವೀಣೆಯಲ್ಲಿ ಪಂಡಿತರು. ವಿಜಯನಗರದ ರಾಜರಾದ ಶ್ರೀಕೃಷ್ಣದೇವರಾಯರಿಗೆ ವೀಣೆ ಕಲಿಸಿದ ಗುರುಗಳಿವರು. ಇಷ್ಟೆಲ್ಲ ಹಿನ್ನೆಲೆ ಇರುವ ರಾಯರಿಗೆ ಸಂಗೀತ, ಸಂಗೀತ ರಚನೆ ರಕ್ತಗತವಾಗಿಯೇ ಬಂದಿದೆ. ಅಲ್ಲದೆ ತಾತನ ಮೂಲಕ ವೀಣೆಯನ್ನು ನುಡಿಸುವ ಕಲೆ ಕರಗತ ಮಾಡಿಕೊಂಡವರು ರಾಯರು. ಹೀಗೆ ಮನೆತನದಿಂದ ಬಂದ ವೀಣೆ ನುಡಿಸಾಣಿಕೆ ಕಲೆಯನ್ನು ಕಲಿತು ರಾಯರು ನುಡಿಸಲಾರಂಭಿಸಿದರೆ ಕೇಳುಗರಿಗೆ ಪರಮಾನಂದವಾಗುತ್ತಿತ್ತು. ಭಕ್ತಿರಸದ ಹೊನಲೇ ಹರಿದು ಭಕ್ತಿಲೋಕದಲ್ಲಿ ಪುಳಕಿತರಾಗುತ್ತಿದ್ದರು ಕೇಳುಗರು.

ಸಂಗೀತ ಪರಂಪರೆಯಲ್ಲಿ ಹರಿದಾಸ ಚಳವಳಿಯ ಪಾತ್ರ ಬಹಳ ಮಹತ್ವದ್ದು. ಇದನ್ನು ಪ್ರೋತ್ಸಾಹಿಸುವಲ್ಲಿ ರಾಘವೇಂದ್ರ ರಾಯರ ಪಾತ್ರವೂ ಅಷ್ಟೇ ಪ್ರಮುಖವಾದದ್ದು. ಹೀಗಾಗಿಯೇ ರಾಯಚೂರು, ವಿಜಾಪುರ ಸುತ್ತಮುತ್ತಲಿನ ಅನೇಕ ದಾಸರು ರಾಘವೇಂದ್ರರ ಮೇಲೆ ಅನೇಕ ಹಾಡುಗಳನ್ನು ರಚಿಸಿದರು. ವಿಜಯದಾಸರು ಮಂತ್ರಾಲಯ ರಾಯರ ಮೇಲೆ ಅನೇಕ ಹಾಡುಗಳನ್ನು ರಚಿಸಿದ್ದಾರೆ. ಅಲ್ಲದೆ ಸುಳಾದಿಗಳನ್ನೂ ಬರೆದಿದ್ದು, ಇವೆಲ್ಲವೂ ಜನಪ್ರಿಯವಾಗಿವೆ. ವಾಗ್ಗೇಯಕಾರ ಅನ್ನಮಾಚಾರ್ಯರು ರಾಯರ ಮೇಲೆ ತೆಲುಗಿನಲ್ಲಿ ಬರೆದ ಸುಳಾದಿ ಮಾಯಾಮಾಳವಗೌಳ ರಾಗದಲ್ಲಿ ಪ್ರಾರಂಭವಾಗಿ ಶ್ರೀರಾಗದೊಂದಿಗೆ ಕೊನೆಗೊಂಡಿದ್ದು, ಇದರಲ್ಲಿ ರಾಯರನ್ನು ಅತ್ಯಂತ ವಿಶಿಷ್ಟವಾಗಿ ವರ್ಣಿಸಿದ್ದಾರೆ.

ಹಾಡುಗಳನ್ನು ಹಾಡುವ ಮೂಲಕ, ಇದೇ ಹಾಡುಗಳನ್ನು ವಾದ್ಯಗಳಲ್ಲಿ ಅನುರಣನಗೊಳಿಸುವ ಮೂಲಕ, ನೃತ್ಯ ಮಾಡುವ ಮೂಲಕ ಭಕ್ತರ ಸಮುದಾಯ ನಾದದಲೆಯಲ್ಲಿ ತೇಲಿಹೋಗುವುದಂತೂ ನಿಸ್ಸಂಶಯ.

ಪ್ರತಿಕ್ರಿಯಿಸಿ: feedback@sudha.co.in